Ref.No. 220/2018

MW–1,

ದಿನಾಂಕಃ 04–02–2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ– 2 ನೇ ಪಾರ್ಟಿ ಪರವಾಗಿಃ ಶ್ರೀ. ಎಲ್ ಎಂ ಪಿ  ವಕೀಲರಿಂದಃ

2018 ರಲ್ಲಿ ನಮ್ಮ ಸಂಸ್ಥೆಯಲ್ಲಿ ಸುಮಾರು 400 ಕ್ಕಿಂತ ಹೆಚ್ಚು ಜನ ಕಾರ್ಮಿಕರು ಇದ್ದರು ಎಂದರೆ ಇರಬಹುದು. ನಮ್ಮ ಸಂಸ್ಥೆ ಈಗ ಸುಮಾರು 22–23 ವರ್ಷಗಳಿಂದ ಚಾಲ್ತಿಯಲ್ಲಿದೆ ಎಂದರೆ ಸರಿ . ಪ್ರಾರಂಭದಲ್ಲಿ ಸಂಸ್ಥೆಯನ್ನು ಚಿಕ್ಕ ಜಾಗದಲ್ಲಿ ಪ್ರಾರಂಬಿಸಿ ನಂತರ ಪ್ರಸ್ತುತ ಜಾಗದಲ್ಲಿ ನಡೆಸಲಾಗುತ್ತಿದೆ ಎಂದರೆ ಸರಿ . ನಮ್ಮ ಸಂಸ್ಥೆಯ ಉತ್ಪಾದನೆ ಮತ್ತು ಲಾಭಗಳು ಹೆಚ್ಚಾಗಿದ್ದರಿಂದ ನಾವು ಪ್ರಸ್ತುತ ಜಾಗದಲ್ಲಿ ಸಂಸ್ಥೆಯನ್ನು ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ . ನಮ್ಮ ಸಂಸ್ಥೆಯ ಉತ್ಪಾದನೆ ಮತ್ತು ಲಾಭಗಳು ಹೆಚ್ಚಾಗದೇ ಇದ್ದುದರಿಂದ ನಾವು ಪ್ರಸ್ತುತ  ಜಾಗದಲ್ಲಿ ಸಂಸ್ಥೆಯನ್ನು ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯಲ್ಲಿ ದೃಡೀಕೃತ ಸ್ಥಾಯಿ ಆದೇಶ ಇದೆ ಎಂದರೆ ಸರಿ . ಸದರಿ  ದೃಡೀಕೃತ ಸ್ಥಾಯಿ ಆದೇಶ ವನ್ನು ಯಾವಾಗ ನಮ್ಮ ಸಂಸ್ಥೆ ಗೆ ಅನ್ವಯಿಸಲಾಗಿರುತ್ತದೆ ಎಂದರೆ ಈಗ ನನಗೆ ನೆನಪಿಲ್ಲ. 2018 ರವೆಗೆ ನಮ್ಮ ಸಂಸ್ಥೆಗೆ ತೆಗೆದುಕೊಂಡ ಕಾರ್ಮಿಕರಿಗೆ appointment letter ಗಳನ್ನು ನೀಡಲಾಗಿರುವುದಿಲ್ಲ ಎಂದರೆ ಸರಿಯಲ್ಲ .

2018 ರಲ್ಲಿ ನಮ್ಮ ಸಂಸ್ಥೆಯ ಕಾರ್ಮಿಕರು Vinyas innovative techonologies workers union ನ ಸದಸ್ಯರಾಗಿದ್ದರ ಬಗ್ಗೆ ನಮ್ಮ ಸಂಸ್ಥೆ ಗೆ ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಈಗ ನನಗೆ ನೆನಪಿಲ್ಲ. 2016 ರಲ್ಲಿ ನಮ್ಮ ಸಂಸ್ಥೆಯ ಕಾರ್ಮಿಕರಿಗೆ ಹೊಸತಾಗಿ ನೇಮಕಾತಿ ಪತ್ರಗಳನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ . ಸದರಿ ನೇಮಕಾತಿ ಪತ್ರದಲ್ಲಿ ಹೊಸ ಷರತ್ತುಗಳನ್ನು ಸೇರ್ಪಡಿಸಿ ಕಾರ್ಮಿಕ ರಿಗೆ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ . ಮಾರ್ಚ್ 2017 ರಲ್ಲಿ ನಮ್ಮ ಸಂಸ್ಥೆಯ ಕಾರ್ಮಿಕರಿಗೆ Vinyas innovative techonologies workers union ನ ಮೂಲಕ ತಮ್ಮ ಬೇಡಿಕೆಗಳನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬೇಡಿಕೆಗಳ ಪಟ್ಟಿ ನಮಗೆ ತಲುಪಿರುವುದಿಲ್ಲ. ಸದರಿ ಬೇಡಿಕೆ ಪಟ್ಟಿಯ ಬಗ್ಗೆ ನಾವು ಯಾವುದೇ ಪ್ರತಿಕ್ರಿಯೆಯನ್ನು  ನೀಡದೇ ಇದ್ದುದರಿಂದ ಯೂನಿಯನ್ ಸದರಿ ವಿಚಾರದ ಬಗ್ಗೆ ವಿವಾದವನ್ನು ಸಂಧಾನ ಅಧಿಕಾರಿಯವರ ಮುಂದೆ ಎತ್ತಿರುತ್ತಾರೆ ಎಂದರೆ , ಸದರಿ ಬೇಡಿಕೆ ಪಟ್ಟಿಯ ಬಗ್ಗೆ ಸಂಧಾನ ಅಧಿಕಾರಿಗಳು ನಮಗೆ ನೋಟೀಸನ್ನು ನೀಡಿದಾಗ ಗೊತ್ತಾಗಿರುತ್ತದೆ. ಸಂಧಾನ ಅಧಿಕಾರಿಗಳ ಮುಂದೆ ನಡೆದ ಸಂಧಾದ ಸಭೆಗಳಲ್ಲಿ ನಾವು ಆಕ್ಷೇಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ . ನಮ್ಮ ಸಂಸ್ಥೆಯು ಬಹು ರಾಷ್ಟ್ರಿಯ ಕಂಪನಿಗಳಿಗೆ high end  electronic component ಗಳನ್ನು ತಯಾರಿಸುತ್ತದೆ ಎಂದರೆ ಸರಿಯಲ್ಲ . ನಮ್ಮ ಸಂಸ್ಥೆಯು ಪಿ ಸಿ ಬಿ ಅಸೆಂಬ್ಲಿ ಮಾಡುತ್ತದೆ.

ಸದರಿ ಪಿ ಸಿ ಬಿ ಸರ್ಕ್ಯೂಟ್ ಗಳು ವಿಮಾನಗಳಲ್ಲಿ ಬಳಸಲಾಗುತ್ತದೆ ಎಂದರೆ ಸರಿಯಲ್ಲ ನಾವು ತಯಾರಿಸುವ ಪಿ ಸಿ ಬಿ ಗಳು ರಪೇಲ್ ಕಂಪನಿಗಳಿಗೆ ಕಳುಹಿಸುತ್ತಿದ್ದೆವು ಎಂದರೆ ಸರಿಯಲ್ಲ .
ಪಿ ಸಿ ಬಿ ಅಸೆಂಬ್ಲಿ ಗಳನ್ನು ನಾವು ಯಾವುದೇ ಬಹು ರಾಷ್ಟ್ರಿಯ ಕಂಪನಿ ಗಳಿಗೆ ಮಾರುತ್ತಿರಲಿಲ್ಲ. ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನಾವು ಕ್ಯಾಸುಲ್ ಲೀವ್ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ . ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಯಾವುದೇ ರೀತಿಯ ವೇತನ ಶ್ರೇಣಿ ಇರಲಿಲ್ಲ ಎಂದರೆ ಸರಿಯಲ್ಲ . ನಾವು ಕಾರ್ಮಿಕ ರಿಗೆ ನೀಡಿದಂತಹ ನೇಮಕಾತಿ ಪತ್ರದಲ್ಲಿ ಅವರ ವೇತನ ಶ್ರೇಣಿ ನಮೂದಿಸಿರುವುದಿಲ್ಲ ಎಂದೆರ ಸಾಕ್ಷಿದಾರರು ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ . 2018 ರ ವರೆಗೆ ಕಾರ್ಮಿಕರಿಗೆ ಹೆಚ್ ಆರ್ ಎ ನೀಡಲಾಗುತ್ತಿರಲಿಲ್ಲ ಎಂದರೆ ನನಗೆ ಈಗ ನೆನಪಿಲ್ಲ.

ನಮ್ಮ ಕಂಪನಿಯು ಒಳ್ಳೆಯ ರಫ್ತು ಮಾಡುವ ಕಂಪನಿ ಎಂದು ರಾಷ್ಟ ಮಟ್ಟದಲ್ಲಿ ಪ್ರಶಸ್ತಿ ಕೂಡ ಬಂದಿತ್ತು ಎಂದರೆ ಸರಿಯಲ್ಲ . 2017–18 ರಲ್ಲಿ ನಮ್ಮ ಸಂಸ್ಥೆಯು ನಷ್ಟದಲ್ಲಿ ಇತ್ತೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಅದಕ್ಕಿಂತ ಮುಂಚೆ ನಮ್ಮ ಸಂಸ್ಥೆಯು ನಷ್ಟದಲ್ಲಿ ಇತ್ತೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. 2017 ರ ನಂತರ ನಮ್ಮ ಸಂಸ್ಥೆಯು ನಷ್ಟದಲ್ಲಿ ಇತ್ತೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಸಂಧಾನ ಸಭೆಯಲ್ಲಿ audited statement ಗಳನ್ನು ಹಾಜರುಪಡಿಸಲಾಗಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ . 2019 ರವರೆಗೆ ನಮ್ಮ ಸಂಸ್ಥೆಯು ಬೇಸಿಕ್ ಮತ್ತು ವಿ ಡಿ ಎ ಗಳನ್ನು ಹೊರತು ಪಡಿಸಿ ಬೇರೆ ಯಾವುದೇ ವೇತನ ಸೌಲಭ್ಯಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . 2019 ರವರೆಗೆ ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡು ಕಾರ್ಮಿಕರ ವೇತನ ರೂ. 9,000/– ದಿಂದ 10,000/– ದವರೆಗೆ ಇತ್ತು ಎಂದರೆ ನನಗೆ ಈಗ ನೆನಪಿಲ್ಲ. 2018 ರಲ್ಲಿ ನಮ್ಮ ಸಂಸ್ಥೆಯ ಅಭಿವೃದ್ದಿಗಾಗಿ ತಿರುಪತಿಯ ವಿಕೃತ ಮಾಲ ಇಂಡಸ್ಟ್ರಿಲ್ ಏರಿಯಾದಲ್ಲಿ ಮತ್ತೊಂದು ಘಟಕವನ್ನು ಪ್ರಾರಂಭಿಸಿದೆವು ಎಂದರೆ ಸರಿ . ಆ ಸಂಧರ್ಬದಲ್ಲಿ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದ 94 ಕಾರ್ಮಿಕ ರನ್ನು ಅಲ್ಲಿಗೆ ವರ್ಗಾಯಿಸಲಾಗಿರುತ್ತದೆ ಎಂದರೆ ಸರಿ . ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ education allowance, uniform, washing allowance ಗಳನ್ನು ನೀಡುತ್ತಿರುವುದಿಲ್ಲ ಎಂದರೆ ಅದರ ಅವಶ್ಯಕತೆ ಇರಲಿಲ್ಲ. ಕಾರ್ಮಿಕರಿಗೆ ನೀಡಿದಂತಹ ನೇಮಕಾತಿ ಪತ್ರ ಮತ್ತು standing orders ನಲ್ಲಿ promotion policy ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ ಎಂದರೆ ಈಗ ನನಗೆ ನೆನಪಿಲ್ಲ. ನಮ್ಮ ಸಂಸ್ಥೆಯಲ್ಲಿ ಕಾರ್ಮಿಕ ರ ನಿವೃತ್ತಿಯ ವಯಸ್ಸು 58 ವರ್ಷ ಆಗಿತ್ತು ಎಂದರೆ ಈಗ ನನಗೆ ನೆನಪಿಲ್ಲ. ನಾನು 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಹೆಚ್ ಆರ್ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಕಾರ್ಮಿಕ ರಿಗೆ ನೀಡುವಂತಹ ವೇತನ, ಸೌಲಭ್ಯ ಮತ್ತು ದೃಡೀಕೃತ ಸ್ಥಾಯಿ ಆದೇಶದ ಬಗ್ಗೆ ಅರಿವು ನನ್ನ ಕರ್ತವ್ಯದ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ .

2 ನೇ ಪಾರ್ಟಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.